
# ಪ್ರಜಾಮತ

## ಸಚಿತ್ರ ಸುದ್ಧಿ ವಾರ ಪತ್ರಿಕೆ

VOL. 40 No. 9
21st July 1968



35

# ಪ್ರತಿಭಾನ್ವಿತ ಲೇಖಕರ ಹಿಂದೆ ಪತ್ನಿಯರು

● ಸಿ. ಆರ್. ಕಮಲಾ ಹಂಪನಾ

## ಮನೆಯ ಸಹನೆ

"ಸಂಸಾರವೆಂಬ ಭಾಗ್ಯ ವಿರಲಿ' ಎಂದು ಪುರಂದರದಾಸರು ಹಾಡಿರುವಂತೆ ನನಗೆ ಸಂಸಾರ ಸೌಭಾಗ್ಯ ಲಭ್ಯವಾಗಿದೆ; ನನ್ನ ಸೌಭಾಗ್ಯ ಸತಿ ಯಿಂದ ಎಂದು ಐವತ್ತು ವರುಷಗಳ ಸುಖ ದ ಸಂಸಾರ ಜೀವನದ ಸಾರವನ್ನು ಉಂಡಿರುವ ಶ್ರೀ ಸಿದ್ಧಯ್ಯ ಪುರಾಣಿಕರು ತಮ್ಮ ಪತ್ನಿಯ ಬಗ್ಗೆ ಮೆಚ್ಚಿ ನುಡಿಯುತ್ತಾರೆ. "ನನ್ನ ಮನೆಯ ಸಹನೆ, ನನ್ನ ಮನೆಯ ಸೈರಣೆ ಅವಳೇ. ಬಂದು ಹೋಗುವ ಅತಿಥಿಗಳಿಂದ, ನೆಲೆ ಯಿಂದ ನನ್ನ ಮನೆ ಎಷ್ಟೋ ಬಾರಿ ಒಂದು ಮಠ ಆಗುವುದುಂಟು. ಆದರೆ ಅದರಿಂದ ಮನಸ್ಸಿಗೆ ಸ್ವಲ್ಪವೂ ಬೇಸರ ವನ್ನು ತಂದುಕೊಳ್ಳದೆ ಸಹನೆಯಿಂದ ವರ್ತಿಸಿ ನಮ್ಮ ಕೆಲಸಗಳನ್ನು ಅತಂಕ ವಿಲ್ಲದಂತೆ ಅನುವಾಗಿಸಿದ್ದಾಳೆ ನನ್ನಾಕೆ. ನನ್ನ ಬರವಣಿಗೆಯು ಒಂದೊಂದು ಭಾಗ ವನ್ನೂ ಓದುಗರನ್ನು ಅತ್ಯಂತ ಇಷ್ಟವಾಗಿ, ಓರಣವಾಗಿ ಎತ್ತಿಟ್ಟು ನನ್ನ ಸಾಹಿತ್ಯಕ್ಕೆ ಸಂಪೂರ್ಣ ನೆರವು ನೀಡಿದ್ದಾಳೆ" ಇದು ಆರಂಭ ಹಂದಿಲಿಂದಾಗಿ ಪತ್ನಿಯ ಬಗ್ಗೆ ನುಡಿದ ಸಿದ್ಧಯ್ಯ ಪುರಾ



### ಶ್ರೀಮತಿ ಗಿರಿಜಾದೇವಿ ಸಿದ್ಧಯ್ಯ ಪುರಾಣಿಕ

ನ್ನು ಅನುಭವಿಸಿದರೆಂದೇ ಹೇಳಬೇಕು. ಬೆಂಗಳೂರಿನಿಂದ ಹಾವೇರಿಗೆ ವರ ಊರಿಗೆ ವರ್ಗವಾದಾಗ "ಮಕ್ಕಳ ಮೇಲೆ ಇಷ್ಟ, ಗಂಡನ ಮೇಲೆ ಪ್ರಾಣ" ಎನ್ನುವಂತೆ ಆಯಿತು ಗಿರಿಜಾದೇವಿಯವರ ಸ್ಥಿತಿ. ಆದರೂ ಮಕ್ಕಳ ಅಭ್ಯುದಯ ವನ್ನು ಆಲೋಚಿಸಿದ ತಾಯಿ ಗಿರಿಜಾದೇವರು ಮಕ್ಕಳಿಗಾಗಿ ಬೆಂಗಳೂರಿನಲ್ಲೇ ಉಳಿದರು; ಸಹನೆಯಿಂದ ಕಷ್ಟವನ್ನು ಸಹಿಸಿಕೊಂಡರು.

ಶ್ರೀಮಂತರೂ ಸಾಹಿತ್ಯಪ್ರಿಯರೂ ಆಗಿದ್ದ ನೈನಾವತಿ ಬೀಡಿಯವರು ಸಿದ್ಧಯ್ಯ ಪುರಾಣಿಕರಿಗೆ ತಾಯಿಯಂತೆ ಇದ್ದರು. ಶ್ರೀಮತಿಯವರಿಗೂ ಅಷ್ಟೆ. ಹಾಗೆಯೇ ಗೌರಾದೇವಿ ಇಂಚಲಮಠ, ಪ್ರ ಮಿ ಳಾ ಬಾ ಯಿ ನ ರ ಸಿ ಂ ಗ ರಾ ವ್ ಮಾ ನ್ವಿ, ಶ್ರೀಮತಿಯವರ



ಶ್ರೀ ಸಿದ್ಧಯ್ಯ ಪುರಾಣಿಕ ದಂಪತಿಗಳು

ಚಿತ್ರ : ಆರ್. ರಾಮಚಂದ್ರಸ್ವಾಮಿ

ಕನ್ನಡ ಪದಗಳ ಸೌಂದರ್ಯರಹಸ್ಯವನ್ನು ಅರಿತವರು 'ಕಾವ್ಯಾನಂದ' ರಾದ ಶ್ರೀ ಸಿದ್ಧಯ್ಯಪುರಾಣಿಕರು. ಅವರ ಕಾವ್ಯ ಸೊಗಲಸೋಮೇಶ್ವರನ ದೇಗುಲವಿದ್ದಂತೆ. ಕವಿ ಕಾವ್ಯಾನಂದರ ಅಂತರಂಗ ಗಂಗೆಯಾಗಿ, ಅವರ ಮನೆಯ ಸಹನೆ, ಸೈರಣೆಯಾಗಿ ಇರುವ ಶ್ರೀಮತಿ ಗಿರಿಜಾದೇವಿ [illegible]ರೆ.

ಣಿಕರ ನುಡಿಗಳು. ಇದು ಹಿರಿಗೆ ನೀಡಿದ ಶ್ರೀಮತಿಯವರ ಮೇಲುನೋಟದ ಹಾಯುವುದಿ, ಪತಿಯ ಅನೇಕ ಕವಿ ಗಳ ಭಾವನೆಗಳಿಗೆ ಇವರೇ ಸ್ಫೂರ್ತಿ ಯಾಗಿದ್ದಾರೆ, ಅಂತರಂಗ ಗಂಗೆಯಾಗಿದ್ದಾರೆ ಇನ್ನೂ ಕೆಲವು ಕವಿ ಗಳಲ್ಲಿ ಶ್ರೀಮತಿ ಗಿರಿಜಾದೇವಿಯವರೇ ನಾಯಕಿಯಾಗಿದ್ದಾರೆ.

ನವ ದೇಗುಲ ಜೀವ ದೇವನು
ಜೀವನವೆ ಆರಾಧನೆ
ಹಗಲು ದೀಪವು ರಾತ್ರಿ ಅಕ್ಷತೆ
ನೈವೇದ್ಯವು ಸಾಧನೆ
ಶ್ರೀ ತುಳುಕುವ ಮನೆಯು ಸ್ವರ್ಗವು
ಪ್ರೀತಿಸಿ ದೇವತೆಗಳು
ಧನತರವು ಗಾರ್ಹಸ್ಥ್ಯ ಯೋಗ್ಯವು
ಪ್ರೀತಿಸಿ ದಂಪತಿಗಳು'

ಸಿದ್ಧಯ್ಯಪುರಾಣಿಕರ ದಾಂಪತ್ಯ ಜೀವನಾನುಭವದ ಆಳದ ಈ ಮಾತುಗಳು ಗಿರಿಜಾದೇವಿಯವರಿಂದ ಅವರ ಬದುಕಿನಲ್ಲಿ ಸಿಕ್ಕ ಸತ್ಯವಾದ ಸಿದ್ಧಯ್ಯ ಪುರಾಣಿಕರ ಜೀವನಕ್ಕೆ ಹಿಡಿದ ಕನ್ನಡಿಯಾಗಿ ನುಡಿಯುತ್ತಿದ್ದಾರೆ ಅವರ ಪತ್ನಿ. ಎಂದೇ 'ಮಾನಸ ಸರೋವರ' ಎನ್ನುವ ದ್ಯ ಕವನಸಂಕಲನ ಒಂದನ್ನು ಮ್ಮ ಮಡದಿಗೆ ಅಕ್ಕರೆಯಿಂದ ಅರ್ಪಿಸಿದ್ದಾರೆ. ಅಲ್ಲಿ ಪತ್ನಿಯ ಸಹಾಯದ ಮಾತುಗಳಿಂದ ಕವಿ ನಮ್ರರಾಗಿ ಗೆ ನುಡಿದಿದ್ದಾರೆ:

"ನನ್ನ ಬಾಳದಾರಿಯಲ್ಲಿ ಒಲವಿನ ಎಣ್ಣೆ ಹಾಕಿ ಉರಿಯುತ್ತಿರುವ ಸತ್ಯಮಯಿ ನ ಗಿರಿಜಾದೇವಿಗೆ—

ಮನೆ, ಚಿಕ್ಕ ಬಳಗವನ್ನು ಎನ್ನುವ ಸಜ್ಜನ ಶರಣದಂಪತಿಗಳಿಗೆ ಮಗಳಾಗಿ ೧೯೨೬ ರಲ್ಲಿ ಧಾರವಾಡದಲ್ಲಿ ಜನಿಸಿದರು. ಇವರು ಹುಟ್ಟುವ ವೇಳೆಗೆ ತಂದೆ ನಿಧನರಾಗಿದ್ದರೂ, ತಾಯಿಯ ಗುಣಗಳ ಇವರನ್ನು ತಾಯಿ ಚಿಕ್ಕಮ್ಮನವರು ಪ್ರೀತಿಯಿಂದ ಸಾಕಿ ಸಲಹಿದರು. ತಂದೆ ಇಲ್ಲ ಎನ್ನುವ ಕೊರಗು ಒಮ್ಮೆಯಾದರೂ ಮುಗ್ಧ ಮಗಳಲ್ಲಿ ಉಂಟಾಗದಂತೆ ಮಮತೆಯಿಂದ ಮಡಿಲಲ್ಲಿ ಬೆಳೆಸಿದರು. ತಾಯಿಯ ಕಣ್ಣಾಳದಲ್ಲಿ ಗಿರಿಜಾದೇವಿಯವರ ವಿದ್ಯಾಭ್ಯಾಸ ಎಸ್.ಎಸ್.ಎಲ್.ಸಿ.ವರೆಗೂ ನಿರಾತಂಕವಾಗಿ ಸಾಗಿತು. ಮುಂದೆ ಓದುವ ತೀವ್ರ ಹಂಬಲ ಗಿರಿಜಾದೇವಿಯವರದಾಗಿದ್ದರೂ ಆ ಆಸೆ ಕೈಗೂಡಲಿಲ್ಲ. ಶ್ರೀಮತಿ ಸರೋಜಿನಿ ಮಹಿಷಿಯವರು ಇವರ ಸಹಪಾಠಿಯಾಗಿದ್ದಾರೆ.

## ಪವಿತ್ರ ದೇಗುಲ

೧೯೪೪ರಲ್ಲಿ ಗಿರಿಜಾದೇವಿಯವರಿಗೆ ಸಿದ್ಧಯ್ಯಪುರಾಣಿಕರೊಂದಿಗೆ ಧಾರವಾಡದಲ್ಲಿ ಮದುವೆಯಾಯಿತು. ಮನೆಯ ಹಿರಿಯ ಸೊಸೆಯನ್ನು ಮಾವನವರಾದ ಪಂಡಿತ ಕಲ್ಲಿನಾಥ ಶಾಸ್ತ್ರಿಗಳು, ಅತ್ತೆಯವರಾದ ಮಾವನವರು ಪ್ರೀತಿಯಿಂದ ಬರಮಾಡಿಕೊಂಡರು. ಹಿರಿಯರಲ್ಲಿ ಭಯಭಕ್ತಿಯಿಂದ ನಡೆದು ಗಿರಿಜಾದೇವಿಯವರು ಒಳ್ಳೆಯ ಸೊಸೆ ಎನಿಸಿಕೊಂಡರು. ಮಾವನವರು ಅಣ್ಣ—ನವ್ರೊಂದಿರು. ಇವರು ಅಕ್ಕತಂಗಿಯರಿಂದ ಕೂಡಿದ್ದ ಹಿರಿಯ ಮನೆ ಎಂದೂ ಬೇರೆಯಾಗ ಬಾರದಿಲ್ಲ. ಅದಕ್ಕೆ ಬದ

ನೆ ದೇ ಗಿರಿಜಾದೇವರು ಕಾರಣರು; ಎಂದೇ ಉತ್ತಮ ಗೃಹಿಣಿಯಾದರು.

## ಕಲೆಗಳಲ್ಲಿ ಮಮತೆ

ಶ್ರೀ ಮ ತಿ ಗಿರಿಜಾದೇವಿಯವರ ಮಾತೃಭಾಷೆ ಕನ್ನಡವೆ ಆದರೂ ಮರಾಠಿಯೂ ಅವರಿಗೆ ಚೆನ್ನಾಗಿ ಬರುತ್ತದೆ. ಪತಿಯ ಜೊತೆ ಊರೂರು ಸುತ್ತುವಾಗ ತೆಲುಗು, ಹಿಂದಿ, ತಮಿಳು ಭಾಷೆಗಳ ಪರಿಚಯವನ್ನು ಚೆನ್ನಾಗಿ ಮಾಡಿಕೊಂಡ ಕುಶಾಗ್ರಮತಿ ಗಿರಿಜಾದೇವಿಯವರಾಗಿದ್ದಾರೆ. ಶ್ರೀಮತಿಯವರಿಗೆ ಉತ್ತರಾದಿ ಶಾಸ್ತ್ರೀಯ ಸಂಗೀತದ ಜ್ಞಾನವಿದೆ. ಹಿಂದೆ ಇದು ಹುಚ್ಚಾಗಿ ಹಾಡುತ್ತಿದ್ದ ಈಗ ಅಭ್ಯಾಸ ಕಡಿಮೆಯಾಗಿದೆ.

ಕಸೂತಿ, ಕಿನಗೆ, ಹೊಲಿಗೆ, ಹೋಟಿಗಾರಿಕೆ ಇವು ಇವರ ಪ್ರಿಯವಾದ ಹವ್ಯಾಸಗಳು. ಇಂದಿಗೂ ಮನೆಯಲ್ಲಿ ತಮ್ಮ ಹಾಗೂ ತಮ್ಮ ಮಕ್ಕಳ ಬಟ್ಟೆಗಳನ್ನು ಇವರೇ ಅಂದವಾಗಿ ಹೊಲಿಯುತ್ತಾರೆ, ಇವರ ಮನೆಯ ಅಲಂಕಾರಿಕ ವಸ್ತುಗಳು ಇವರ ಕೈಕೌಶಲದಿಂದ ಚೆಲುವಿನ ಸೊಬಗನ್ನು ಪಡೆದುಕೊಂಡಿವೆ.

ಗಿರಿಜಾದೇವಿಯವರಿಗೆ ಹಬ್ಬಗಳಲ್ಲಿ ನಂಬಿಕೆಯುಂಟು, ಸಾಧಾರಣವಾಗಿ ಎಲ್ಲ ಹಬ್ಬಗಳನ್ನೂ ಆಚರಿಸಿಕೊಂಡು ಬಂದಿದ್ದಾರೆ. ಪ್ರತಿ ಸೋಮವಾರವೂ "ವರದ ಶಂಕರ"ನ ಪೂಜೆ ಮಾಡಿ ಸೋಮವಾರದ ವ್ರತವನ್ನು ಆಚರಿಸಿಕೊಂಡು ಬಂದಿದ್ದಾರೆ

## ಸಮಾಜ ಚಟುವಟಿಕೆ

ಗಿರಿಜಾದೇವಿಯವರು ಹೈದರಾ

ಎಂದರೆ ಇವರು ಮಾಡುತ್ತಿದ್ದ ಸ್ವಾರಸ್ಯಕರವಾದ ಭಾಷಣಗಳು. ಅಷ್ಟೇ ಅಲ್ಲದೆ ಸಾರ್ವಜನಿಕ ಸಭೆಗಳಲ್ಲಿಯೂ ದಕ್ಷಚೆನ್ನಾಗಿ ಮಾತಾಡಿ ಉತ್ತಮ ವಾಗ್ಮಿ ಎನಿಸಿದ್ದಾರೆ. ಮಹಿಳಾಮಂಡಲದ ಅಧ್ಯಕ್ಷಿಣಿಯಾಗಿದ್ದು ಸಮಾಜಸೇವೆ ಸಲ್ಲಿಸಿದ್ದಾರೆ ಇವರೇ ಚಂದಾ ಎತ್ತಿ ದುಡ್ಡನ್ನು ಸಂಗ್ರಹಿಸಿ ಒಂದು ಭವನವನ್ನು ಕಟ್ಟಿಸಿದರು. ಚರಕ ಮುಂತಾದುವುಗಳನ್ನು ತರಿಸಿಕೊಟ್ಟು ಜನತೆಯಲ್ಲಿ ರಾಷ್ಟ್ರಭಕ್ತಿಯನ್ನು ತುಂಬಿ ಕೆಲವು ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸಿಕೊಟ್ಟರು. ಇದು ಗಿರಿಜಾದೇವರ ಸಾಮಾಜಿಕ ಪ್ರಜ್ಞೆಗೆ ಹಿಡಿದ ಕನ್ನಡಿಯಾಗಿದೆ.

ಪುರಾಣಿಕ ದಂಪತಿಗಳಿಗೆ ಮೂವರು ಹೆಣ್ಣುಮಕ್ಕಳು ಒಬ್ಬ ಮಗ. ಮಕ್ಕಳೆಲ್ಲರಲ್ಲಿಯೂ ತಂದೆಯ ಸಾಹಿತ್ಯ ಗುಣ, ತಾಯಿಯ ವಿನಯ-ವಿನಯ, ಸೌಜನ್ಯಗಳು ಕಂಡುಬರುತ್ತವೆ. ಹಿರಿಯಮಗಳು ವಿಜಯಲಕ್ಷ್ಮಿ, ತಂದೆಯ ಕೆಲಸಕ್ಕೆ ಬಲಗೈಯಂತೆ ಇದ್ದಾರೆ. ಅವರು ಬಿ. ಎಸ್ಸಿ. ಮುಗಿಸಿದ ಮೇಲೆ ಮದುವೆ ಆಗಿ ಈಗ ಗಂಡನ ಮನೆಯಲ್ಲಿ ಇದ್ದಾರೆ. ಎರಡನೆಯ ಮಗಳು ಶಿವಗೀತಾ ನಾಲ್ಕನೆಯ ವರುಷದ ಎಂ.ಬಿ.ಬಿ.ಎಸ್. ನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಮಗ ಮೂರನೆಯವರಾದ ಬಿ.ಇ. ತರಗತಿಯಲ್ಲಿ ಇದ್ದಾರೆ, ಕಡೆಯಮಗಳು ಭಾರತೀದೇವಿ ಪಿ.ಯು.ಸಿ. ಮುಗಿಸಿದ್ದಾರೆ. ಮಕ್ಕಳೆಲ್ಲರೂ ತಂದೆಯ ಕೆಲಸಕ್ಕೆ ಅಲ್ಲದೆ ತಾಯಿಯ ಎಲ್ಲ ಕೆಲಸಗಳಿಗೂ ನೆರವಾಗಿ ತಂದೆ ತಾಯಿಗೆ ಹೆಚ್ಚು

ಹಿಂದು ಅಕ್ಕ — ಮೊದಲಾದವರ ಮಾರ್ಗದರ್ಶನ, ಅವರುಗಳ ಪ್ರಭಾವ ಗಿರಿಜಾದೇವಿಯವರಿಗೆ ಸತ್ಪಥದ ದಾರಿ ದೊರಕಾಗಿದೆ. ಅವರ ಪ್ರಭಾವಕ್ಕೆ ಒಳಗಾದಂತೆ ಅವರುಗಳಿಗೆ ಗಿರಿಜಾದೇವಿಯವರು ನಮ್ರತೆಯಿಂದ ಗೌರವವನ್ನು ಅರ್ಪಿಸುತ್ತಾರೆ.

## ಸಾಹಿತ್ಯಲೋಕ

ಶ್ರೀಮತಿಯವರು ಪತಿಯ ಬರೆದವನ್ನೆಲ್ಲಾ ಓದಿದ್ದಾರೆ; ಮೆಚ್ಚಿದ್ದಾರೆ. ಅಧಿಮಾನ ತುಂಬ, ಬರಹ ಚೆನ್ನಾಗಿದೆ ಎಂದು ನುಡಿಯುತ್ತಾರೆ. "ನನ್ನುದು ಎಂಬ ಮೇಲೆ ಅಭಿಮಾನ ಮೂಡಿಯೇ ಮೂಡುತ್ತದೆ" ಎಂದು ಗಿರಿಜಾದೇವರು ಕಾವ್ಯಾನಂದರ ಸಾಹಿತ್ಯದ ಬಗ್ಗೆ ಮುಗುಳ್ನಗೆಯಿಂದ ಉತ್ತರಿಸಿದರೂ, ಬಹುವಾಗಿ ಕನ್ನಡದ ಎಲ್ಲ ಕಾವ್ಯಗಳೂ, ಕವಿತೆಗಳೂ ಅವರಿಗೆ ಪ್ರಿಯವಾದುವೆ ದ ರಾ. ಬೇಂದ್ರೆಯವರಂತೂ ದಂಪತಿಗಳಿಗೆ ಹಿರಿಯಅಣ್ಣನಂತೆ ಇಂದಿಗೂ ಸಿ ದ್ಧ ಯ್ಯ ಪು ರಾ ಣಿಕರು ಎಲ್ಲೇ ಇದ್ದರೂ ಅಲ್ಲಿಗೆ ಬೇಂದ್ರೆಯವರು ಆಗಮಿಸಿದರೆ, ಅಂದು ಅವರ ಮನೆಯಲ್ಲಿ ಬೇಂದ್ರೆಯವರಿಂದ ಕಾವ್ಯವಾಚನ ಆಗಲೇಬೇಕು ಅದನ್ನು ಕೇಳಿ ದಂಪತಿಗಳು ಮಾತ್ರವಲ್ಲ, ಇತರ ಹಲವರು ಮನೆಯವರು ಪಡೆಯುವ ಭಾಗ್ಯ ವಗೆಯೂ ಬೇಕು-ಇದು ಈ ಸಾಹಿತ್ಯಪ್ರಿಯ ದಂಪತಿಗಳ ಹಂಬಲ, ಇದು ನೆರವೇರಲೇಬೇಕು. ಇಲ್ಲಿಯವರೆಗೂ ನೆರವೇರುತ್ತಲೆ ಬಂದಿದೆ.

ಗೋಕಾಕ್, ಪುಟಿನ, ಮಾಸ್ತಿ, ವಿ. ಸೀತಾರಾಮಯ್ಯ, ಎಸ್. ಕೆ., ಅನಕೃ—